153 ನೇಳಿ = (20)
4KA
050126

# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ ಶ್ರೀಮತಿ ಹೇಮಲತಾ ನಾಯಕ್ ಹಾಗೂ ಕೇಶವ ಪ್ರಸಾದ್ ಇವರುಗಳು ನಿಯಮ – 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ :**

ಬರಗಾಲದಿಂದ ಸರಿಯಾಗಿ ಫಸಲು ಕೈಸೇರದೆ ರೈತರು ನಷ್ಟ ಅನುಭವಿಸಿ ದಿಕ್ಕುತೋಚದಂತಾಗಿರುವ ಸಮಯದಲ್ಲಿ ರಾಜ್ಯ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿರುವ ಕಾರಣ ರೈತರ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಸರ್ಕಾರವು ತನ್ನ ಪಶುಪಾಲನಾ ವಿರೋಧಿ ನೀತಿಗಳಿಂದ ಹಾಲು ಉತ್ಪಾದಕರ ಬದುಕನ್ನು ನಿರ್ನಾಮ ಮಾಡಲು ಹೊರಟಿರುವ ವಿಷಯ ಖಂಡನೀಯವಾಗಿದೆ. ಸರ್ಕಾರವು ಕಾಲ ಕಾಲಕ್ಕೆ ಬಿಡುಗಡೆ ಮಾಡಬೇಕಾದ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡುತ್ತಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ರೈತರಿಂದ ಪಡೆಯುತ್ತಿರುವ ಹಾಲಿನ ದರ ಅತ್ಯಂತ ಕಡಿಮೆ ಇಂತಹ ಸಂದರ್ಭದಲ್ಲಿ ಅಲ್ಪ ಮೊತ್ತದ ಪ್ರೋತ್ಸಾಹ ಧನವನ್ನು ಸರಿಯಾದ ಸಮಯಕ್ಕೆ ನೀಡುತ್ತಿಲ್ಲ ಹೀಗಾಗಿ ಹಾಲು ಉತ್ಪಾದಕರು ಹೈನುಗಾರಿಕೆ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಹಾಲು ಒಕ್ಕೂಟಗಳ ದರದ ಜೊತೆಗೆ ಪ್ರೋತ್ಸಾಹ ಧನವನ್ನು ನೀಡಿದರೆ ಮಾತ್ರ ಹಾಲು ಉತ್ಪಾದಕರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಸಾದ್ಯ ಆದುದರಿಂದ ರಾಜ್ಯ ಸರ್ಕಾರವು ಪ್ರಸ್ತುತ ಬಾಕಿ ಉಳಿಸಿಕೊಂಡಿರುವ ಹಾಲಿನ ಪ್ರೋತ್ಸಾಹ ಧನವನ್ನು ಬಿಡುಗಡೆಗೊಳಿಸಿ ಹಾಗೂ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಹೆಚ್ಚಿಸಬೇಕೆಂಬ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಹೇಳಿಕೆ:**

2024-25 ನೇ ಸಾಲಿನಲ್ಲಿ ಹಾಲು ಉತ್ಪಾದನೆಗಾಗಿ ನಿಗಧಿಯಾದ ಹಾಲಿನ ಪ್ರೋತ್ಸಾಹಧನ ರೂ.1300.00 ಕೋಟಿಗಳು. ಮೊದಲನೇ ಮತ್ತು ಎರಡನೇ ಕಂತಿನಲ್ಲಿ ಬಿಡುಗಡೆಯಾದ ಅನುದಾನ ರೂ.649.99 ಕೋಟಿಗಳಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ 2023ನೇ ಸಾಲಿನ ಸೆಪ್ಟೆಂಬರ್-2023 ರಿಂದ ಡಿಸೆಂಬರ್-2023 ರವರೆಗೆ ಹಾಗೂ 2024-25ನೇ ಸಾಲಿನ ಮಾರ್ಚ್-2024 ಮತ್ತು ಏಪ್ರಿಲ್-2024ರ ಮಾಹೆಗಳಿಗೆ ಒಟ್ಟು ರೂ.594.93 ಕೋಟಿಗಳ ಪ್ರೋತ್ಸಾಹಧನವನ್ನು ಪಾವತಿಸಲು ಕ್ರಮವಹಿಸಲಾಗಿದೆ.

ಬಾಕಿ ಉಳಿದ ಜನವರಿ-2024ರ ಮಾಹೆಯ ರೂ.46.70 ಕೋಟಿ, ಫೆಬ್ರುವರಿ-2024ರ ರೂ.98.86 ಕೋಟಿ ಹಾಗೂ 2024-25ನೇ ಸಾಲಿನ ಮೇ-2024ರ ಮಾಹೆಯ ರೂ.106.97ಕೋಟಿಗಳನ್ನು 3ನೇ ಕಂತಿನ ಅನುದಾನ ಬಿಡುಗಡೆ ಆದ ನಂತರ ಪಾವತಿಸಲು ಕ್ರಮವಹಿಸಲಾಗುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ 2023-24ನೇ ಸಾಲಿನ ಎಲ್ಲಾ ಮಾಹೆಗಳಿಗೂ ಹಾಗೂ 2024-25ನೇ ಸಾಲಿನಲ್ಲಿ ಮೇ-2024ರ ಮಾಹೆಯವರೆಗೆ ಪ್ರೋತ್ಸಾಹಧನವನ್ನು ಪಾವತಿಸಲು ಕ್ರಮವಹಿಸಲಾಗಿದೆ.

ಪ್ರೋತ್ಸಾಹಧನವನ್ನು ಹೆಚ್ಚಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಇ- ಪಸಂಮೀ 117 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**